ಹೋಗಿ ಬರೆದರು. ಅವರು ನನ್ನ ಹತ್ತಿರ ಬಂದಿದ್ದರು. ಪ್ರಭಾವಿ ವ್ಯಕ್ತಿಗಳಿಂದ ಶಿಫಾರಸ್ಸು ತೆಗೆದುಕೊಂಡು ಬಂದು ವಾಪಸ್ ಮಂಡ್ಯಕ್ಕೆ ಕೊಡಿ ಎಂದು ಕೇಳಿದರು. ನಾನು ಅದನ್ನು ಮಾಡಲಿಲ್ಲ. ಮಾನ್ಯ ಹಿರಿಯ ಸದಸ್ಯರಾದ ಸಿದ್ಧರವರಿಗೆ ಒಂದು ಭರವಸೆ ಕೊಡುತ್ತೇನೆ. ಕನಕಪುರದಿಂದ ರಿಲೀವ್ ಮಾಡಬಾರದೆಂದು ಆಗಲೇ ಹೇಳಿದ್ದೇನೆ. ಈಶಾನ್ಯ ದಿಕ್ಕಿನ ಏಳು ಜಿಲ್ಲೆಗಳಿಂದ ಯಾರನ್ನೂ ರಿಲೀವ್ ಮಾಡುವುದಿಲ್ಲವೆಂದು ಹೇಳಿ ಆಗಿದೆ. ಜಿಲ್ಲಾ ಪಂಚಾಯ್ತಿಗಳೇ ಒಂದು ನಿರ್ಧಾರ ಮಾಡಿದರೆ, ಒಂದು ನಿರ್ಣಯ ಮಾಡಿದರೆ, ನಾವು ಅದಕ್ಕೆ ಸಂಪೂರ್ಣ ಗೌರವ ಕೊಡುತ್ತೇವೆ. ಈ ತರಹ ಮೂರು ಜಿಲ್ಲಾ ಪಂಚಾಯ್ತಿಗಳು ಈಗಾಗಲೇ ಮಾಡಿವೆ. ಆದ್ದರಿಂದ, ದಯಮಾಡಿ ತಾವು ಸಹಕರಿಸಬೇಕು. ಶಕ್ತಿಮೀರಿ ಈ ಕೆಲಸ ಮಾಡಿ ಆದಷ್ಟು ಬೇಗ ಶಿಕ್ಷಕರನ್ನು ತುಂಬುವ ಕೆಲಸವನ್ನು ನಾನು ಮಾಡುತ್ತೇನೆ.

ಬೆಂಗಳೂರಿನ ಶಾಲೆಗಳಲ್ಲಿ ಡೊನೇಷನ್ ಹಾವಳಿ

375(3628): ಶ್ರೀ ಕೆ.ಎನ್. ಸುಬ್ಬಾರೆಡ್ಡಿ (ಬಸವನಗುಡಿ) ಮಾನ್ಯ ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?

ಅ) ಇತ್ತೀಚೆಗೆ ಬೆಂಗಳೂರು ನಗರದಲ್ಲಿ ಡೊನೇಷನ್ ಹಾವಳಿ ಹೆಚ್ಚಾಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

ಆ) ಬಂದಿದ್ದಲ್ಲಿ ಡೊನೇಷನ್ ನಿಯಂತ್ರಣಕ್ಕೆ ಸರ್ಕಾರ ಕೈಗೊಂಡ ಕ್ರಮಗಳೇನು;

ಇ) ಕಳೆದ ಎರಡು ವರ್ಷಗಳಿಂದ ಇಂತಹ ಎಷ್ಟು ಪ್ರಕರಣವನ್ನು ಸರ್ಕಾರ ದಾಖಲಿಸಿದೆ; (ಪ್ರಾಥಮಿಕ ಪ್ರೌಢ ಶಾಲೆವಾರು ವಿವರ ಕೊಡುವುದು)?

ಶ್ರೀ ಪ್ರೊ ಬಿ.ಕೆ. ಚಂದ್ರಶೇಖರ್ (ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಸಚಿವರು):

ಅ) ಬಂದಿದೆ.

ಅಂತಹ ಶಾಲೆಗಳ ವಿರುದ್ಧ ಜಿಲ್ಲಾ ರೆಗ್ಯುಲೇಟ್‌ಗಳ ಅಥಾರಿಟಿಯ ಅಧ್ಯಕ್ಷರು ಹಾಗೂ ಸದಸ್ಯರು ತಪಾಸಣೆ ನಡೆಸಿ ಶಾಲೆಗಳ ಆಡಳಿತ ಮಂಡಳಿಗಳಿಗೆ ಕಾರಣ ಕೇಳುವ ನೋಟೀಸ್‌ಗಳನ್ನು ಜಾರಿ ಮಾಡಲಾಗಿದೆ.

ಆ) ಶಿಕ್ಷಣ ಕಾಯಿದೆ ಈ ಕುರಿತು ಸರ್ಕಾರ ದಿನಾಂಕ 28–4–2003ರ ಸುತ್ತೋಲೆ ಇಡಿ 11/ಪಿಜಿಸಿ/03ನ್ನು ಹೊರಡಿಸಿದೆ. 15 ಪ್ರಕರಣಗಳಲ್ಲಿ ಕಾಯಿದೆ / ನಿಯಮಗಳನ್ನು ಉಲ್ಲಂಘಿಸಿರುವ ಕೆಳಕಂಡ ಶಾಲೆಗಳ ಮೇಲೆ ಸಂಬಂಧಪಟ್ಟ ನ್ಯಾಯಾಲಯಗಳಲ್ಲಿ ಕ್ರಿಮಿನಲ್ ಮೊಕದ್ದಮೆಗಳನ್ನು ಹೂಡಲಾಗಿದೆ ತಾವುಗಳು ವಿಚಾರನಾ ಹಂತದಲ್ಲಿರುತ್ತವೆ.

1. ಬೆಂಗಳೂರು ಪ್ರೌಢಶಾಲೆ, ಬೆಂಗಳೂರು.
2. ಸುದರ್ಶನ ವಿದ್ಯಾಮಂದಿರ, ಜಯನಗರ.
3. ಹೋಲಿ ಕ್ರಿಸ್ಟ್ ಸ್ಕೂಲ್, ಬೆಂಗಳೂರು.
4. ಸೆಂಟ್ ಕ್ಯಾಥರೀನ್ ಸ್ಕೂಲ್, ಕಾಟನ್ ಪೇಟ್.
5. ಗುಡ್ವಿಲ್ ಪ್ರಾಥಮಿಕ ಮತ್ತು ಪ್ರೌಢಶಾಲೆ, ಫ್ರೇಜರ್ ಟೌನ್, ಬೆಂಗಳೂರು.

ಕಾರಣ ಕೇಳುವ ನೋಟೀಸ್ ಜಾರಿ ಮಾಡಿರುವ ಶಾಲೆಗಳು:–

1. ಇಂದಿರಾ ಪ್ರಿಯದರ್ಶಿನಿ ಶಾಲೆ, ಜೆ.ಪಿ. ನಗರ.

2. ಅರವಿಂದೋ ಮೆಮೋರಿಯಲ್ ಶಾಲೆ, ಪದ್ಮನಾಭನಗರ, ಬನಶಂಕರಿ
3. ಸೆಂಟ್ ಪಾಲ್ಸ್ ಶಾಲೆ, ಜಯನಗರ.
4. ಕಾರ್ಮಲ್ ಶಾಲೆ, ಜಯನಗರ.
5. ಇನ್ನಿಸಫ್ರೀ, ಜಯನಗರ.
6. ಮೇರಿ ಇಮಕ್ಯೂಲೇಟ್ ವಿಲ್ಸನ್ ಗಾರ್ಡನ್
7. ಕೇಂಬ್ರಿಡ್ಜ್ ಆಂಗ್ಲ ಪ್ರಾಥಮಿಕ ಮತ್ತು ಪ್ರೌಢಶಾಲೆ, ಯಲಹಂಕ.
8. ಅಕ್ಸ್-ಫರ್ಡ್ ಆಂಗ್ಲ ಪ್ರಾಥಮಿಕ ಮತ್ತು ಪ್ರೌಢಶಾಲೆ, ಬೆಟ್ಟಲಸೂರು.
9. ಗುಡ್ ವಿಲ್ ಬಾಲಕಿಯರ ಪ್ರೌಢಶಾಲೆ, ಫ್ರೇಜರ ಟೌನ್.
10. ಸೆಂಟ್ ಅಲಾಷಿಯಸ್ ಪ್ರೌಢಶಾಲೆ, ಕಾಕ್ಸ್‌ಟೌನ್.

ಶ್ರೀ ಕೆ. ಎನ್. ಸುಬ್ಬಾರೆಡ್ಡಿ:– ಮಾನ್ಯ ಅಧ್ಯಕ್ಷರೇ, ಮಾನ್ಯ ಸಚಿವರು ಡೊನೇಷನ್ ಹಾವಳಿ ಬಗ್ಗೆ ಶಾಲೆಗಳ ವಿರುದ್ಧ ಜಿಲ್ಲಾ ರೆಗ್ಯುಲೇಟೆಡ್ ಆಥಾರಿಟಿಯ ಅಧ್ಯಕ್ಷರು, ಸದಸ್ಯರು ತಪಾಸಣೆ ನಡೆಸಿ, ಶಾಲೆಗಳ ಆಡಳಿತ ಮಂಡಳಿಗೆ ಕಾರಣ ಕೇಳುವ ನೋಟೀಸುಗಳನ್ನು ಜಾರಿ ಮಾಡಲಾಗಿದೆ ಎಂದು ಹೇಳಿದ್ದಾರೆ. ಎಷ್ಟು ಶಾಲೆಗಳಿಗೆ ಈ ನೋಟೀಸುಗಳನ್ನು ಜಾರಿ ಮಾಡಿದೆ? ಎರಡನೇ ಪ್ರಶ್ನೆ, ಬರೀ ಹತ್ತು ಶಾಲೆಗಳ ಮೇಲೆ ಕಾರ್ಯಕ್ರಮ ಜರುಗಿಸಿದ್ದೀರಿ. ಇಡೀ ರಾಜ್ಯದಲ್ಲಿ ಎಲ್ಲಾ ಪ್ರೈವೇಟ್ ಮ್ಯಾನೇಜ್‌ಮೆಂಟಿನವರು ಡೊನೇಷನ್ ಕಲೆಕ್ಟ್ ಮಾಡುತ್ತಿದ್ದಾರೆ.

ಎಲ್ಲರೂ ಡೊನೇಷನ್‌ನನ್ನು ಕಲೆಕ್ಟ್ ಮಾಡುತ್ತಾ ಇದ್ದಾರೆ. What is the steps taken to prevent it? ಎರಡನೇದಾಗಿ ಎಲ್ಲಾ ಮೇನೇಜ್‌ಮೆಂಟ್‌ನವರು ಸರಕಾರಕ್ಕೆ ಅಂಡರ್‌ಟೇಕಿಂಗ್ ಕೊಟ್ಟಿದ್ದಾರೆ. ಅದು ಏನೆಂದರೆ, Clause (iv) The management shall not collect any donation free from the students and other parents and collect fees as prescribed from time to time by the State Government. ಆದ್ದರಿಂದ ಇಲ್ಲಿ ಏನಾಗಿದೆಯೆಂದರೆ, ತಾವುಗಳು ಕೇವಲ ಬಿಸಿಯೂಟದ ಪ್ರಾರಂಭದಲ್ಲಿಯೇ ಬಿದ್ದುಹೋಗಿಬಿಟ್ಟಿದ್ದೀರಿ. ಈ ಡೊನೇಷನ್ ಬಗ್ಗೆ ನೀವು ಏನೂ ಕಾರ್ಯಕ್ರಮಗಳನ್ನು ತೆಗೆದುಕೊಂಡಿಲ್ಲ. ಬಹುಶಃ ಹಿಂದೆ ಗೋವಿಂದೇಗೌಡರು ಶಾಲೆಗಳಿಗೆ ವಿಸಿಟ್ ಮಾಡುತ್ತಿದ್ದರು. ತಾವು ಇದುವರೆಗೂ ಯಾವ ಪ್ರೈವೇಟ್‌ಮೇನೇಜ್‌ಮೆಂಟ್ ಶಾಲೆಗಳನ್ನು ಚೆಕ್ ಮಾಡಿದ್ದೀರಿ? ಯಾವ ಯಾವ ಶಾಲೆಗಳಿಗೆ ನೋಟೀಸ್ ಕೊಟ್ಟಿದ್ದೀರಿ? ಯಾವ ಅಕ್ಷನ್ ತೆಗೆದುಕೊಂಡಿದ್ದೀರಿ? ಇದುವರೆಗೂ ಅಂಥ ಒಂದು ಉದಾಹರಣೆಯನ್ನು ಕೊಡುವುದಾದರೆ....

ಅಧ್ಯಕ್ಷರು:– ತಾವು ಬ್ರೀಫ್ ಆಗಿ ತಮ್ಮ ಪ್ರಶ್ನೆಯನ್ನು ಕೇಳಿ. ಅವರು ಉತ್ತರ ಹೇಳುತ್ತಾರೆ. ಪ್ರಶ್ನೆ ಕೇಳುವುದನ್ನು ಬಿಟ್ಟು ಬರೇ ಭಾಷಣ ಮಾಡುತ್ತಾ ಹೋದರೆ ಹೇಗೆ?

ಪ್ರೋ ಬಿ.ಕೆ. ಚಂದ್ರಶೇಖರ್:– ಸನ್ಮಾನ್ಯ ಅಧ್ಯಕ್ಷರೆ, ಮಾನ್ಯ ಸುಬ್ಬಾರೆಡ್ಡಿಯವರು ಕೇಳಿದ ಪ್ರಶ್ನೆಗೆ ಉತ್ತರ ಕೊಡುತ್ತಾ ಸುಮಾರು ಐದು ಶಾಲೆಗಳು ಎರಡು ವರ್ಷಗಳ ಹಿಂದೆ ಇನ್ಸ್‌ಪೆಕ್ಟ್ ಮಾಡಿದ್ದು, ಬೆಂಗಳೂರು ಹೈಸ್ಕೂಲ್, ಹೋಲಿ ಕ್ರೈಸ್ಟ್ ಸ್ಕೂಲ್, ಸುದರ್ಶನ ವಿದ್ಯಾಮಂದಿರ, ಸೈಂಟ್ ಕ್ಯಾಥರಿನ್ ಸ್ಕೂಲ್, ಹೀಗೆ ಒಟ್ಟು ನಾಲ್ಕು ಶಾಲೆಗಳ ವಿರುದ್ಧ ಕೇಸ್ ಬುಕ್ ಆಗಿ, ಕೋರ್ಟ್‌ನಲ್ಲಿ ಚಾರ್ಜಸ್‌ನ್ನು ಫ್ರೇಮ್ ಮಾಡಿದ್ದಾರೆ. ಅದಾದ ಮೇಲೆ ನಾನು ಪೋಷಕರುಗಳ ಅರಿವಿನ ಮೇಲೆ, ಮನವರಿಕೆಯ ಮೇಲೆ, ಅವರುಗಳು ಕೊಟ್ಟ ಮನವಿಗಳ ಮೇಲೆ, ವಿಚಾರಗಳ ಮೇಲೆ, ಪದ್ಧತಿಯಂತೆ,

ಜಿಲ್ಲಾಧಿಕಾರಿಗಳ ನೇತೃತ್ವದಲ್ಲಿ ಒಂದು ಸಮಿತಿ ಇದೆ. ಇದನ್ನು ಬಹಳ ಹಿಂದೆಯೇ ಎಜ್ಯುಕೇಶನ್ ಆಕ್ಟ್‌ನಲ್ಲಿ ಮಾಡಿದ್ದರು. ಅದಕ್ಕೆ ನಾವು ಪುನಃ ಚಾಲನೆ ಕಬಟ್ಟು, ನೀವೇ ಒಂದು ಡಿಸೈಡ್ ಮಾಡಿ ನೀವೇ ಹೋಗಿ ಆ ಶಾಲೆಗಳನ್ನು ಇನ್ಸ್‌ಪೆಕ್ಟ್ ಮಾಡಿ, ಇಂಥ ಕಡೆ ಹೋಗಿ, ಇಂಥ ಕಡೆ ಬಿಡಿ ಎಂದು ನಾನು ಹೇಳಲು ಹೋಗಿಲ್ಲ. ಆದರೆ ದಯವಿಟ್ಟು ಯಾವ ಶಾಲೆಗಳಲ್ಲಿಯೂ ಹೆರ್ಯಾಸ್ ಮಾಡಬೇಡಿ ಎಂದು ಹೇಳಿದ್ದೇನೆ. ನಾಟಕೀಯವಾಗಿ ನಾವು ಏನೂ ಮಾಡುವುದು ಬೇಡ, ಟಿ.ವಿ. ಯವರನ್ನು ಒಂದೆರಡು ದಿವಸ ಕರೆದುಕೊಂಡು ಹೋಗಿ ತೋರಿಸುವುದು, ಬೇಡ ಎಂದು ಹೇಳಿದ್ದೇನೆ. ಇಂದಿರಾ ಪ್ರಿಯದರ್ಶಿನಿ ಶಾಲೆ, ಜೆ.ಪಿ. ನಗರ, ಅರವಿಂದ ಮೆಮೋರಿಯಲ್ ಶಾಲೆ, ಪದ್ಮನಾಭನಗರ, ಇದು ಬನಶಂಕರಿಯ ನಮ್ಮ ಮನೆಯ ಹತ್ತಿರ ಇರುವುದು. ಅದರ ವಿರುದ್ಧ ನಾನು ಧರಣ ಮಾಡಿದ್ದೆ. ಸೈಂಟ್‌ಪಾಲ್ಸ್ ಶಾಲೆ, ಜಯನಗರ, ಕಾರ್ಮೆಲ್ ಶಾಲೆ, ಜಯನಗರ, ಇನಿಸ್‌ಫ್ರೀ ಸ್ಕೂಲ್ ಜಯನಗರ, ಹೀಗೆ ಹತ್ತು ಶಾಲೆಗಳಿಗೆ ಹೋಗಿ, ಅವರಿಗೆ ಶೋಕಾಸ್ ನೋಟೀಸ್ ಕೊಟ್ಟು, ಅದಕ್ಕೆ 2–3 ಶಾಲೆಗಳಿಂದ ಉತ್ತರ ಬಂದು, ಬಾಕಿ ಶಾಲೆಗಳಿಗೆ ನಾವು ಕಾನೂನು ಪ್ರಕಾರ ಹಾಗೂ ಶಿಕ್ಷಣ ಕಾಯಿದೆಯ ಪ್ರಕಾರ ಏನು ಮಾಡಬೇಕೋ ಅದನ್ನು ಮಾಡುತ್ತೇವೆ. ಆದರೆ ಒಂದು ಪ್ರಾರ್ಥನೆ ಮಾಡಿಕೊಳ್ಳುತ್ತೇನೆ. ಒಂದು ಬಹಿರಂಗವಾದ ಪ್ರಾರ್ಥನೆ ಅಂದರೆ, ಯಾವುದೇ ಪ್ರಭಾವ ವ್ಯಕ್ತಿಗಳು ಅಲ್ಲಿ ಹೋಗಬೇಡಿ, ಇಲ್ಲಿ ಹೋಗಬೇಡಿ ಎನ್ನುವುದು, ಅವರು ಒಳ್ಳೆಯ ಶಾಲೆಯನ್ನು ನಡೆಸುತ್ತಿದ್ದಾರೆ ದಯವಿಟ್ಟು ಅಲ್ಲಿಗೆ ಹೋಗಬೇಡಿ ಎನ್ನುವುದು ಮುಂತಾಗಿ ಯಾರೂ ಮಾಡಬೇಡಿ. ಅದು ಇಲ್ಲದೆ ಹೋದರೆ ನಾನಂತೂ ಕೆಲಸ ಮಾಡುವುದಕ್ಕೆ ತಯಾರಾಗಿದ್ದೇನೆ.

ಶ್ರೀ ಎಸ್. ಸುರೇಶ್‌ಕುಮಾರ್:– ಮಾನ್ಯ ಅಧ್ಯಕ್ಷರೇ, ಕರ್ನಾಟಕದಲ್ಲಿರುವ ಇಂಗ್ಲೀಷ್ ಸ್ಕೂಲ್‌ಗಳಲ್ಲಿ ಡೊನೇಷನ್ ಹಾವಳಿ ಹೇಗಿದೆ ಅಂದರೆ, ಈ ಸದನದಲ್ಲಿ ಸಾರಿಗೆ ಸಚಿವರು ನಿದ್ದೆ ಮಾಡುತ್ತಾ ಇರುವ ಹಾಗೆ ಇದೆ. ಅದು ಬದಲಾವಣೆಯಾಗುವುದಿಲ್ಲ. ನೀವೂ ಕೂಡ ಅದನ್ನು ಸವಾಲಾಗಿ ಸ್ವೀಕರಿಸುವುದಿಲ್ಲ. ಅದು ಆಗುತ್ತಾ ಇರುತ್ತದೆ. ಅವ್ಯಾಹತವಾಗಿ ಆಗುತ್ತಿರುತ್ತದೆ. ನಾನು ಬಹಳ ಬಯಸಿದ್ದೆ. ಮಾನ್ಯ ಚಂದ್ರಶೇಖರ್‌ರವರು ಸಚಿವರಾದ ಮೇಲೆ, ಅವರು ಬುದ್ದಿಜೀವಿಗಳು, ಅವರು ಸಚಿವರಾದ ಮೇಲೆ, ಇಂಥ ವಿಚಾರಕ್ಕೆ ಒಳ್ಳೆಯ ಉತ್ತರ ಬರುತ್ತದೆ ಎಂದು ಅಂದುಕೊಂಡಿದ್ದೆ. ಆದರೆ ಉತ್ತರದಲ್ಲಿಯೂ ಕೂಡ ಇದು ಬುದ್ದಿವಂತಿಕೆಯ ಉತ್ತರವಲ್ಲ. ಅವರು ಕೇಳಿರುವುದು ಹೆಚ್ಚಾಗಿರುವುದು ಸರಕಾರದ ಗಮನಕ್ಕೆ ಬಂದಿದೆಯೇ ಎಂದು. ಉತ್ತರದಲ್ಲಿ ಬಂದಿದೆ ಎಂದು ಹೇಳಿದ್ದಾರೆ. ಬಂದಿದ್ದಲ್ಲಿ ಡೊನೇಷನ್ ನಿಯಂತ್ರಣಕ್ಕೆ ಸರಕಾರದವರು ಕೈಗೊಂಡ ಕ್ರಮಗಳೇನು? ನಿಯಂತ್ರಣಕ್ಕೂ, ಅಕ್ಷನ್ ತೆಗೆದುಕೊಳ್ಳುವುದಕ್ಕೂ ಬಹಳ ವ್ಯತ್ಯಾಸವಿದೆ. ಡೆಂಗ್ಯೂಫಿವರ್ ಬರದೇ ಇರುವುದಕ್ಕೆ ಅಕ್ಷನ್ ತೆಗೆದುಕೊಳ್ಳುವುದು, ಪ್ರಿವೆಂಟಿವ್, ಡೆಂಗ್ಯೂಫಿವರ್ ಬಂದ ಮೇಲೆ, ಅವರನ್ನು ಆಸ್ಪತ್ರೆಗೆ ಸೇರಿಸಿ, ಇಂಟೆನ್ಸೀವ್ ಕೇರ್‌ಯುನಿಟ್‌ಗೆ ಸೇರಿಸುವುದು ಅದು ಅಕ್ಷನ್. ತಾವು ಸರಕಾರದ ಶಿಕ್ಷಣ ಇಲಾಖೆಯವರು ಡೊನೇಷನ್ ನಡೆಯುತ್ತಾ ಇದೆ, ಹಗಲು ದರೋಡೆ ಆಗುತ್ತಾ ಇದೆ ಎಂಬುದು ಗೊತ್ತಿದ್ದರೂ ಕೂಡ, ಅದನ್ನು ನಿಯಂತ್ರಣ ಮಾಡಲು ಏನು ಕ್ರಮವನ್ನು ತೆಗೆದುಕೊಂಡಿದ್ದೀರಿ? ಸರಕಾರದ ಭಯ ಈ ಡೊನೇಶನ್ ಶಾಲೆಗಳಿಗೆ ಏಕೆ ಇಲ್ಲ?

ಪ್ರೊ: ಬಿ.ಕೆ. ಚಂದ್ರಶೇಖರ್:– ಮಾನ್ಯ ಸುರೇಶ್‌ಕುಮಾರ್‌ರವರು ಕೂಡ ಬಹಳ ಬುದ್ದಿವಂತರು. ನನಗೆ ಅವರು ಇಂಟಲೆಕ್ಚುವಲ್ ಎಂದು ಹೇಳಿದ್ದಾರೆ. ಅವರೂ ಕೂಡ ಒಬ್ಬ

ಇಂಟಲೆಕ್ಚುವಲ್ ಆಗಿದ್ದಾರೆ. ದಯಮಾಡಿ ಇದಕ್ಕೊಂದು ಸ್ಪೆಶಲ್ ಡಿಸಕಷನ್ ಕರೆದು, ತಾವುಗಳು ಅಮೂಲ್ಯವಾದ ಸಲಹೆಗಳನ್ನು ಕೊಟ್ಟರೆ ನಾನು ಸ್ವೀಕಾರ ಮಾಡುತ್ತೇನೆ ಸ್ವಾಮಿ.

ಶ್ರೀ ಎಸ್. ಸುರೇಶ್‌ಕುಮಾರ್:– ಇದು ನನ್ನ ಪ್ರಶ್ನೆಗೆ ಉತ್ತರವಲ್ಲ. ನಾನು ಸ್ಪೆಸಿಫಿಕ್ ಆಗಿ ಕೇಳಿದ್ದೇನೆ. ನಿಯಂತ್ರಣಕ್ಕೂ, ಆಕ್ಷನ್‌ಗೂ ವ್ಯತ್ಯಾಸವಿದೆ. ಇವರು ಅಕ್ಷನ್ ತೆಗೆದುಕೊಂಡ ಬಗ್ಗೆ ಹೇಳಿದ್ದಾರೆ. ನಿಯಂತ್ರಣದ ಬಗ್ಗೆ ಏನು ಮಾಡಿದ್ದಾರೆಂದು ಹೇಳಿಲ್ಲ.

ಅಧ್ಯಕ್ಷರು:– ಫರ್ದರ್ ಸಜೆಷನ್ಸ್ ಕೊಡಿ ಎಂದು ಅವರು ಹೇಳುತ್ತಿದ್ದಾರೆ.

ಪ್ರೊ: ಬಿ.ಕೆ. ಚಂದ್ರಶೇಖರ್:– ಮಾನ್ಯ ಅಧ್ಯಕ್ಷರೇ, ನಾನು ಮಾನ್ಯ ಸುರೇಶ್‌ಕುಮಾರ್‌ರವರ ಬಗ್ಗೆ ಬಹಳ ವರ್ಷಗಳಿಂದ ತುಂಬಾ ಗೌರವವನ್ನು ಇಟ್ಟುಕೊಂಡಂಥ ವ್ಯಕ್ತಿ. ಆತ್ಮ ಪರೀಕ್ಷೆ ಮಾಡಿಕೊಂಡು ಎಲ್ಲರೂ ಹೇಳಲಿ. ಇವುಗಳನ್ನು ಪೋಲಿಸಿಂಗ್ ಮಾಡಲು ಒಂದು ರಾಜ್ಯ ಶಕ್ತಿಗೆ ಸಾಧ್ಯವೇ.... ಈ ಶಾಲೆಗಳು? ಇದಕ್ಕೆ ಮೂಲಭೂತ ಕಾರಣಗಳು ಬೇರೆ ಏನಾದರೂ ಇದೆಯೇ? ಇಂಗ್ಲೀಷ್ ವ್ಯಾಮೋಹಕ್ಕೆ ಪೋಷಕರು ಮಕ್ಕಳನ್ನು ಅಲ್ಲಿಗೆ ಕಳುಹಿಸುತ್ತಾ ಇದ್ದಾರೆ. ಯಾವ ಶಾಲೆಗೆ ಮುಲಾಜು, ಮರ್ಜಿ ಇಲ್ಲದೆ ನಾನು ಮಾಡುತ್ತೇನೆ ಸ್ವಾಮಿ. ನನ್ನ ಮಕ್ಕಳನ್ನು ಕನ್ನಡ ಶಾಲೆಗೆ ಕಳುಹಿಸಿರುವುದು ನಿಮಗೆ ಗೊತ್ತು. ದಯವಿಟ್ಟು ಹೇಳಿ.... ಪೋಷಕರಿಗೆ, ಶಾಸಕರಿಗೆ, ಮಂತ್ರಿಗಳಿಗೆ ಮತ್ತು ಹೊರಗಡೆ ಇರುವವರಿಗೆ ಹೇಳಿ.... ಇಂಗ್ಲೀಷ್ ಶಾಲೆಗಳಿಗೆ ಅವರು ಮಕ್ಕಳನ್ನು ಕಳುಹಿಸದೇ ಹೋದರೆ ಅವರಿಂದ, ಸುಬ್ಬಾರೆಡ್ಡಿಯವರಿಂದ ಈ ಪ್ರಶ್ನೆ ಬರುವುದೇ ಇಲ್ಲ. ಸ್ಥಳೀಯವಾಗಿ ಶಾಸಕರುಗಳು ಗೊಡ್ಡು ವಾದವನ್ನು ಹೇಳಲಿ ಅವರು ..... ಸುಬ್ಬಾರೆಡ್ಡಿಯವರು ಯಾವ ಶಾಲೆಗಳಿಗೆ ಹೋಗಿ ನೀವು ಡೊನೇಷನ್ ತೆಗೆದುಕೊಳ್ಳಬೇಡಿ ಎಂದು ಹೇಳಿ ಪರ್‌ಸ್ಯೂವೇಡ್ ಮಾಡಿದ್ದಾರೆಂದು ಹೇಳಲಿ ನನಗೆ.

ಗೊಂದಲ

ಅಧ್ಯಕ್ಷರು:– ದಯವಿಟ್ಟು ಕುಳಿತುಕೊಳ್ಳಿ....

ಶ್ರೀ ಆರಗ ಜ್ಞಾನೇಂದ್ರ:– ಮಾನ್ಯ ಮಂತ್ರಿಗಳ ಈ ರೀತಿಯಾದ ಉತ್ತರದಿಂದ ಡೊನೇಷನ್ ಇನ್ನೂ ಹೆಚ್ಚಾಗುತ್ತದೆ.

ಶ್ರೀ ಹೆಚ್.ಎಸ್. ಶಂಕರಲಿಂಗೇಗೌಡ:– ನಾವೇನಾದರೂ ರೆಕಮಂಡೇಶನ್ ಲೆಟರ್ ಕೊಟ್ಟರೆ ಸೀಟೆ ಕೊಡುವುದಿಲ್ಲ. ರೆಕಮಂಡೇಶನ್ ಲೆಟರ್ ಇದ್ದರೂ ಕೂಡ ವಂತಿಗೆಯನ್ನು ಕೊಡಲೇ ಬೇಕೆಂಬ ಶಾಲೆಗಳೂ ಇವೆ. ಶಿಕ್ಷಣಕ್ಕೆ ಹೆಚ್ಚು ಆದ್ಯತೆಯನ್ನು ಕೊಡತಕ್ಕಂಥ ಸರಕಾರ, ಇವೊತ್ತು ವಿದ್ಯೆಯನ್ನು ಕುಂಠಿತಗೊಳಿಸುತ್ತಾ ಇದೆ. ವ್ಯಾಪಾರ ನಡೆಯುತ್ತ ಇದೆ. ವಿದ್ಯಾಕ್ಷೇತ್ರಗಳು ವ್ಯಾಪಾರದ ಜಾಗವಾಗಿ ಬಿಟ್ಟಿವೆ. ದಯಮಾಡಿ ಇದನ್ನು ಸರ್ಪಕಾವಲಿನಂತೆ ತಡೆಹಿಡಿಯಬೇಕೆಂಬ ಮಾತನ್ನು ನಾನು ಸ್ಪಷ್ಟವಾಗಿ ಹೇಳುತ್ತೇನೆ.

ಶ್ರೀ ಕೆ.ಎನ್. ಸುಬ್ಬಾರೆಡ್ಡಿ:– ಮಾನ್ಯ ಅಧ್ಯಕ್ಷರೆ, ಏಪ್ರಿಲ್ ತಿಂಗಳಲ್ಲಿ ಸರ್ಕ್ಯುಲರ್ ಪ್ರಕಾರ ಎಲ್ಲಾ ಅಡ್ಮಿಶನ್‌ಗಳನ್ನು ಮಾಡಬೇಕು. ಆದರೆ ಮಾನ್ಯ ಸಚಿವರ ಗಮನಕ್ಕೆ ಬಂದಿದೆ. ಏಪ್ರಿಲ್‌ನಲ್ಲಿ ಅನೌನ್ಸ್ ಮಾಡಿ ಅಡ್ಮಿಶನ್‌ಗಳನ್ನು ಮಾಡಬೇಕಾಗಿತ್ತು. ಆದರೆ ಡಿಸೆಂಬರ್‌ನಲ್ಲಿಯೇ ಎಲ್ಲಾ ಅಡ್ಮಿಶನ್‌ಗಳನ್ನು ಮಾಡುತ್ತ ಇದ್ದಾರೆ. ಆ ಮೇಲೆ ಡೊನೇಶನ್ ಎಂದು ಹೇಳುವ ಬದಲು ಡೆವಲಪ್‌ಮೆಂಟ್ ಫಂಡ್ ಎಂದು ಹೇಳುತ್ತಾರೆ. 15 ರಿಂದ 20 ಸಾವಿರ ರೂಪಾಯಿಗಳು

ಕಿಂಡರ್‌ಗಾರ್ಟನ್‌ಗೆ. ಯುಕೆಜಿಗೂ ಅಷ್ಟೇ... ಇದನ್ನು ನೀವು ಏನು ಮಾಡಿದ್ದೀರಿ? ಹಾಗಾದರೆ ಬೆಂಗಳೂರಿನಲ್ಲಿ ಬರೇ ಹತ್ತೇ ಶಾಲೆಗಳು ಇರುವುದು? ಯಾವ ಶಾಲೆಯು ಎಕ್ಸ್‌ಪ್‌ಶನ್ ಇದೆ ಎಂಬುದನ್ನು ತೋರಿಸಿ. ನ್ಯಾಶನಲ್ ಹೈಸ್ಕೂಲ್ ಎಂದು ಹೇಳಬಹುದು. ಅಲ್ಲಿ ಯಾವ ಡೊನೇಷನ್ ಇಲ್ಲ. ಈ ವಿಚಾರವನ್ನು ಮಾನ್ಯ ಮಂತ್ರಿಗಳು ಬಹಳ ಗಂಭೀರವಾಗಿ ತೆಗೆದುಕೊಳ್ಳಬೇಕಾಗಿದೆ.

ಪ್ರೊ: ಬಿ.ಕೆ. ಚಂದ್ರಶೇಖರ್:– ಮಾನ್ಯ ಸುಬ್ಬಾರೆಡ್ಡಿಯವರು ಲೀಡಿಂಗ್ ಅಡ್ವೋಕೇಟ್. ಆ ಶಾಲೆಯವರನ್ನು ನೀವು ಜೈಲಿಗೆ ಕಳುಹಿಸುವುದಕ್ಕೆ ತಯಾರಿದ್ದೀರೇನ್ರಿ ಎಂದು ಬಹಳ ಜನರು ಹೇಳುತ್ತಾರೆ. ಏನು ಮಾಡುವುದು .....ರೂಲ್ ಆಫ್ ಲಾ..... ಇದೆ.

ಶ್ರೀ ಕೆ.ಎನ್. ಸುಬ್ಬಾರೆಡ್ಡಿ:– ನಿಮ್ಮ ಕೈಯಲ್ಲಿ ನಿಯಂತ್ರಣ ಮಾಡಲು ಆಗುವುದಿಲ್ಲ ಎಂದು ಹೇಳಿ... ನಿಮ್ಮ ಪೋರ್ಟ್‌ಪೋಲಿಯೋ, ಬದಲಾವಣೆ ಆಗಲಿ, you are not able to control.....

ಶ್ರೀ ಡಿ.ಬಿ. ಚಂದ್ರೇಗೌಡ:– ಮಾನ್ಯ ಸುಬ್ಬಾರೆಡ್ಡಿಯವರು ಮಕ್ಕಳ ವಿಚಾರವನ್ನು ಮರೆತು ಹೋಗಿದ್ದಾರೆ. ಅವರು ಮಕ್ಕಳ ವಿಚಾರವನ್ನು ಬಿಟ್ಟು ಮೊಮ್ಮಕ್ಕಳ ವಿಚಾರವನ್ನು ಥಿಂಕ್ ಮಾಡಲಿ.

ಪ್ರೊ. ಬಿ.ಕೆ. ಚಂದ್ರಶೇಖರ್:– ನಾನು ಮತ್ತೊಮ್ಮೆ ಹೇಳುತ್ತೇನೆ. ಶಾಸಕರು, ಸ್ನೇಹಿತರುಗಳು ಇಂಥ ಕೆಲಸವನ್ನು ನಿರ್ದಿಷ್ಟವಾಗಿ ಮಾಡಬಹುದು, ಅಥವಾ ಇಂಥ ಶಾಸನವನ್ನು ಮಾಡಬಹುದು ಎಂದು ಹೇಳಲಿ, ಅದನ್ನು ಹೇಗೆ ಎನ್‌ಫೋರ್ಸ್ ಮಾಡಬಹುದು.... ಪ್ರಾಮಾಣಿಕವಾಗಿ ನಮಗೊಂದು ಕಾನ್‌ಶಿಯೆನ್ಸ್ ಇದ್ದರೆ, ಪ್ರಾಕ್ಟಿಕಲ್ ಆಗಿ ಅದನ್ನು ಹೇಗೆ ಎನ್‌ಫೋರ್ಸ್ ಮಾಡಬಹುದು ಎಂದು ಅವರು ಹೇಳಿದ್ದರೆ, ನಾವು ಮಾಡುವುದಕ್ಕೆ ತಯಾರಾಗಿದ್ದೇವೆ. ಸುಮ್ಮನೆ ಬೀದಿಯಲ್ಲಿ ಹೋಗುವವರನ್ನೆಲ್ಲಾ ನಾನು ಅಲ್ಲಿ ನಿಂತಿಕೊಂಡು ನಿಮ್ಮನ್ನು ಅರೆಸ್ಟ್ ಮಾಡುತ್ತೇವೆಂದು ಹೇಳುವುದೆಲ್ಲಾ ಸಾಧ್ಯವಿದೆಯೇ?

ಗ್ರಾಮೀಣ ಪ್ರದೇಶಗಳಲ್ಲಿ ಕುಡಿಯುವ ನೀರಿನ ಸಮಸ್ಯೆ

376(3285): ಶ್ರೀ ಕೃಷ್ಣಮೂರ್ತಿ ಎಂ. (ಕಡೂರು) ಮಾನ್ಯ ಗ್ರಾಮೀಣ ಮತು ನೀರು ಸರಬರಾಜು ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?

ಅ) ರಾಜ್ಯದ ಗ್ರಾಮೀಣ ಜನತೆಗೆ ಕುಡಿಯುವ ನೀರಿನ ಸಂಬಂಧಿಸಿದಂತೆ ತಲಾ ಎಷ್ಟು ಲೀಟರ್ ನೀರು ಒದಗಿಸುವ ಯೋಜನೆಯನ್ನು ಹಮ್ಮಿಕೊಳ್ಳಲಾಗಿದೆ;

ಆ) ಸರಬರಾಜಾಗುತ್ತಿರುವ ಕುಡಿಯುವ ನೀರಿನ ಗುಣಮಟ್ಟವು ತೀರಾ ಕಳಪೆಯಾಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; ಬಂದಿದ್ದಲ್ಲಿ, ಸರ್ಕಾರವು ಕೈಗೊಂಡ ಕ್ರಮಗಳೇನು; ವಿವರ ಒದಗಿಸುವುದು;

ಇ) ಎಷ್ಟು ಕಡೆಗಳಲ್ಲಿ ಗುಣಮಟ್ಟ ಪರೀಕ್ಷೆ ನಡೆಸಲಾಗಿದೆ;

ಈ) ಶುದ್ಧ ಕುಡಿಯುವ ನೀರಿನ ಪೂರೈಕೆಗೆ ಸರ್ಕಾರವು ಯಾವ ಯೋಜನೆಗಳನ್ನು ಹಮ್ಮಿಕೊಂಡಿದೆ?

ಶ್ರೀ ಕೆ.ಬಿ. ಕೋಳಿವಾಡ (ಗ್ರಾಮೀಣ ಮತ್ತು ನೀರು ಸರಬರಾಜು ಸಚಿವರು):

ಅ) ರಾಜ್ಯದ ಗ್ರಾಮೀಣ ಜನತೆಗೆ ದಿನಂಪ್ರತಿ ತಲಾ 55 ಲೀಟರ್ ಪ್ರಮಾಣದಲ್ಲಿ ಕುಡಿಯುವ ನೀರನ್ನು ಒದಗಿಸುವ ಯೋಜನೆಯನ್ನು ಹಮ್ಮಿಕೊಳ್ಳಲಾಗಿದೆ.